

**ಮಗಳು ಸಾರಾ ಜೊತೆ ಅಡೆಲ್ಫೊ ಕಮಿನ್ಸ್ಕಿ**

ಮುಖ್ಯವಾಗಿ ಐಡಿಯಾಗಳಿಗೆ ಯಾವುದೇ ಗಡಿಗಳಿಲ್ಲ ಎಂದು ತೋರಿಸುವುದು ಅವನ ಉದ್ದೇಶವಾಗಿತ್ತು.

ತನ್ನ 70ನೆಯ ವಯಸ್ಸಿನಲ್ಲಿ ಮಗಳ ಒತ್ತಾಯಕ್ಕೆ ಮಣಿದು ತನ್ನ ಹಿಂದಿನ ಬದುಕಿನ ಕತೆಯನ್ನು ಆಕೆಯೊಂದಿಗೆ ಹಂಚಿಕೊಳ್ಳುತ್ತಾನೆ. ಅದೇ 'A Forger's Life' ಎನ್ನುವ ಹೆಸರಿನಲ್ಲಿ ಪುಸ್ತಕವಾಗಿ ಹಲವು ಭಾಷೆಗಳಿಗೆ ಅನುವಾದಗೊಂಡಿದೆ. ಆ ಪುಸ್ತಕ ಬಿಡುಗಡೆಯ ನಂತರ ತಾನು ತನ್ನ ತಂದೆಯೊಡನೆ ಹಲವು ದೇಶಗಳನ್ನು ಸುತ್ತಿದ್ದನ್ನು ಹೇಳುತ್ತಾ ಸಾರಾ ಅಲ್ಲಿ ಹಲವರು ತಮ್ಮ ಕುಟುಂಬದ ಹಳೆಯ ದಾಖಲೆಗಳನ್ನು ತಂದೆಯ ಬಳಿ ತಂದು ತೋರಿಸುತ್ತಾ 'ಇದು ಆತ ಮಾಡಿದ್ದೇ? ತಮ್ಮ ಕುಟುಂಬದ ಬಗ್ಗೆ ಏನಾದರೂ ವಿಷಯ ತಿಳಿದಿದೆಯೇ?' ಎಂದು ಕೇಳಿದ್ದನ್ನು ನೆನಪಿಸಿಕೊಳ್ಳುತ್ತಾಳೆ. ಜೀವನಪ್ರೀತಿ, ಮಾನವೀಯತೆ ಎನ್ನುವುದು ಎಲ್ಲ ಕಾಯ್ದೆ, ಕಾನೂನುಗಳನ್ನು ಮೀರಿ ಮನುಷ್ಯನನ್ನು ಕಾಪಾಡುವ ಬಗೆ ಅನನ್ಯ, ಅನೂಹ್ಯ. ಪ್ರಸ್ತುತ ಲೇಖನ ಆಕೆಯ ಪುಸ್ತಕದ ಆಯ್ದ ಭಾಗ.

ಅಡೆಲ್ಫೋ ಕಮಿನ್ಸ್ಕಿ ಉತ್ತಮ ಛಾಯಾಗ್ರಾಹಕ. ಆತ ನಕಲಿ ದಾಖಲೆಗಳನ್ನು ಸೃಷ್ಟಿಸುವುದನ್ನು ಬಿಟ್ಟ ಮೇಲೆ ಛಾಯಾಗ್ರಹಣವನ್ನೇ ವೃತ್ತಿ ಮಾಡಿಕೊಳ್ಳುತ್ತಾನೆ. ಹಲವು ಸಿನಿಮಾ ಸೆಟ್‌ಗಳ ದೊಡ್ಡ ಆಕಾರದ ಫೋಟೊಗಳನ್ನು ತೆಗೆದುಕೊಡುವ ಕೆಲಸ ಮಾಡುತ್ತಾನೆ. ಛಾಯಾಗ್ರಹಣದಲ್ಲಿ ತನಗೆ ಆಸಕ್ತಿಯಿತ್ತು ಎಂದು ಹೇಳುತ್ತಾ ಪ್ಯಾರಿಸ್ಸಿನ ರಾತ್ರಿಗಳ ಸೌಂದರ್ಯವನ್ನು ತಾನು ಲೆಕ್ಕವಿಲ್ಲದಷ್ಟು ಸಾರಿ ಸೆರೆಹಿಡಿದದ್ದನ್ನು ನೆನಪಿಸಿಕೊಳ್ಳುತ್ತಾನೆ. ಆದರೆ ತನ್ನ ಬಿಡುವಿಲ್ಲದ ಕೆಲಸದ ನಡುವೆ ಆ ಫೋಟೊಗಳನ್ನು ಪ್ರಿಂಟ್ ಮಾಡಿಸಲು ಸಾಧ್ಯವಾಗದೆ ಎಷ್ಟೋ ರೀಲುಗಳು ಬೆಳಕು ಕಾಣದೆ ಪೆಟ್ಟಿಗೆಗಳಲ್ಲಿ ಹೂತುಹೋಗುತ್ತವೆ. ಅಡೆಲ್ಫೋ ಕಮನೆಸ್ಕಿಯ ಬಗ್ಗೆ ಜಾಕ್ವಿಸ್ ಫಲ್ಕ್ ಎನ್ನುವಾತ 'Forging Identity' ಎನ್ನುವ ಸಾಕ್ಷ್ಯಚಿತ್ರ ನಿರ್ಮಿಸಿದ್ದಾನೆ.